ಗಾಂಧಿನಗರ ಪೋಸ್ಟ್

# ‘ಮಹಾನಟಿ’ ಧನ್ಯಶ್ರೀ ಸಿನಿಮಾ ಎಂಟ್ರಿ



■ ಸುಮಲತಾ ಎನ್‌

‘ಮಹಾನಟಿ’ ಕಿರುತೆರೆ ಕಾರ್ಯಕ್ರಮದಲ್ಲಿ ಪ್ರೇಕ್ಷಕರಿಂದ ಬೆನ್ನು ತಟ್ಟಿಸಿಕೊಂಡಿದ್ದ ಧನ್ಯಶ್ರೀ ಸುಜಿತ್, ಈಗ ಬೆಳ್ಳಿತೆರೆಯಲ್ಲಿ ಛಾಪು ಮೂಡಿಸಲು ಅಣಿಯಾಗಿದ್ದಾರೆ. ‘ಹುಬ್ಬಳ್ಳಿ ಹಂಟರ್ಸ್’ ಸಿನಿಮಾ ಮೂಲಕ ತಮ್ಮನ್ನು ಹೊಸ ಧಾಟಿಯಲ್ಲಿ ಪರಿಚಯಿಸಿಕೊಳ್ಳಲು ಹೊರಟಿದ್ದಾರೆ.

ಚಿಕ್ಕಮಗಳೂರಿನ ತರೀಕೆರೆಯ ಧನ್ಯಶ್ರೀ ಓದಿದ್ದು ಬಿಸಿಎ. ಶಾಲಾ ಕಾಲೇಜು ದಿನಗಳಿಂದಲೂ ಓದಿನೊಂದಿಗೆ ಜೊತೆಯಾಗಿದ್ದು ನಟಿಸಬೇಕು ಎನ್ನುವ ಆಸೆ. ಆ ಬಯಕೆಯನ್ನು ಹೊದ್ದುಕೊಂಡೇ ತಮ್ಮ ನಟನಾ ಬದುಕಿಗೆ ಮುನ್ನುಡಿ ಬರೆದಿದ್ದು ‘ಮಹಾನಟಿ’ ಕಾರ್ಯಕ್ರಮದ ಮೂಲಕ. ಈ ಸ್ಪರ್ಧೆಯಲ್ಲಿ ರನ್ನರ್ ಅಪ್ ಆದ ಅವರು ‘ಭರ್ಜರಿ ಬ್ಯಾಚುಲರ್ಸ್’ ಶೋ ಮೂಲಕ ಮತ್ತಷ್ಟು ಅನುಭವಗಳನ್ನು ಜೊತೆಗೂಡಿಸಿಕೊಂಡರು. ಇದೀಗ ಸಿನಿಮಾ ಹಾದಿಯತ್ತ ಹೊರಳಿರುವ ಅವರಲ್ಲಿ, ಇಷ್ಟು ದಿನಗಳ ಕಾಯುವಿಕೆ ನಂತರ ಉತ್ತಮ ಅವಕಾಶವೊಂದು ದೊರೆತಿರುವ ಸಂತಸ ತುಂಬಿದೆ.

‘ಚಿಕ್ಕವಳಿದ್ದಾಗಿನಿಂದ ನನಗೆ ಒಂದೇ ಆಸೆ ಇದ್ದದ್ದು– ನೃತ್ಯ ಮಾಡಬೇಕು, ನಟಿಸಬೇಕು. ನನ್ನ ಅಪ್ಪ ಅಮ್ಮನಿಗೂ ಇದೇ ಆಸೆ ಇತ್ತು. ಓದಿನೊಂದಿಗೆ ನನ್ನನ್ನು ಪ್ರತಿ ಹೆಜ್ಜೆಯಲ್ಲಿಯೂ ನಟನೆಯತ್ತ ಹುರಿದುಂಬಿಸಿದರು. ನನ್ನ ಚಿಕ್ಕ ಪುಟ್ಟ ಗೆಲುವುಗಳಿಗೂ ಖುಷಿಪಡುತ್ತಿದ್ದರು. ಅಪ್ಪನೂ ಸುಮ್ಮನೆ ನಟನೆ ಮಾಡುತ್ತಿದ್ದರು, ರಾಜಕುಮಾರ್ ಅವರನ್ನು ಅನುಕರಿಸುತ್ತಿದ್ದರು. ಅದನ್ನು ನೋಡುತ್ತಾ ನೋಡುತ್ತಾ ನನ್ನಲ್ಲೂ ನಟನೆ ಬಗ್ಗೆ ಆಸಕ್ತಿ ಚಿಗುರಿತು. ಅಮ್ಮ

---

# ಪ್ರೇಕ್ಷಕರ ನಂಬಿಕೆ ಮುಖ್ಯ

‘2026– ಅತಿ ಬ್ಯುಸಿಯಾಗಿರುವ, ಹಾಗೆಯೇ ನನ್ನ ವೃತ್ತಿ ಬದುಕಿನ ನಿರ್ಣಾಯಕ ವರ್ಷವಾಗಿ ರೂಪುಗೊಳ್ಳುತ್ತಿದೆ’ ಎಂದು ಹೇಳಿಕೊಂಡಿದ್ದಾರೆ ನಟ ಡಾಲಿ ಧನಂಜಯ್.

ನಟ ಹಾಗೂ ನಿರ್ಮಾಪಕನಾಗಿ ಧನಂಜಯ್ ಅವರ ಸಾಕಷ್ಟು ಸಿನಿಮಾಗಳು ಈ ವರ್ಷ ಬಿಡುಗಡೆಗೆ ಕಾಯುತ್ತಿವೆ. ಒಂದೇ ಇಮೇಜ್‌ನ ಒಳಗೆ ಕೂರಲು ತಾವು ಇಷ್ಟಪಡುವುದಿಲ್ಲ ಎಂದು ಹೇಳಿರುವ ಡಾಲಿ, ಜನರ ನಂಬಿಕೆಯೊಂದಿಗೆ ಬಂದಿರುವ ಜವಾಬ್ದಾರಿ, ಅದನ್ನು ಉಳಿಸಿಕೊಳ್ಳಲು ತಾವು ಕೈಗೊಂಡ ಪ್ರಯತ್ನಗಳ ಬಗ್ಗೆ ಮಾತನಾಡಿದ್ದಾರೆ.

‘2026– ಪ್ರೊಡಕ್ಷನ್ ಕೆಲಸಗಳೊಂದಿಗೆ ಆರಂಭವಾಯಿತು. ನಾನು ನಿರ್ಮಾಣ ಮಾಡುತ್ತಿರುವ ಸಿನಿಮಾಗಳು ಹೊಸ ನಿರ್ದೇಶಕರನ್ನು, ಹೊಸ ಮುಖಗಳನ್ನು ಒಳಗೊಂಡಿದೆ. ನಿರ್ಮಾಣ ಎನ್ನುವುದು ಒಂದು ಬ್ರ್ಯಾಂಡ್ ಅನ್ನು ವಿಸ್ತರಿಸುವುದಲ್ಲ. ಹೊಸ ಪ್ರತಿಭೆಗಳಿಗೆ ತಕ್ಕ ರೀತಿ ಅವಕಾಶ ಸಿಗುವಂಥ ವಾತಾವರಣ ನಿರ್ಮಿಸುವುದು’ ಎಂದು ತಮ್ಮ ಉದ್ದೇಶವನ್ನು ವಿವರಿಸಿದ್ದಾರೆ.



ಸದ್ಯ ಡಾಲಿ ಅಭಿನಯಿಸಿರುವ ಐದು ಸಿನಿಮಾಗಳು ಬಿಡುಗಡೆಯ ಲಿಸ್ಟ್‌ನಲ್ಲಿವೆ. ಈ ಜೂನ್ ತಿಂಗಳು ಬಂದರೆ, ಡಾಲಿ ಕೊನೆಯ ಸಿನಿಮಾ ಬಿಡುಗಡೆಯಾಗಿ ಎರಡು ವರ್ಷಗಳಾಗುತ್ತವೆ. ‘ನನ್ನ ಕರಿಯರ್‌ನಲ್ಲೇ ಅತಿ ದೊಡ್ಡ ಗ್ಯಾಪ್ ಇದು. ನಾನು ನಟ. ಹೆಚ್ಚೆಚ್ಚು ನಟಿಸಬೇಕಿದೆ. ನನ್ನ ಕರಿಯರ್‌ನ ಆರಂಭದಿಂದಲೂ ನನಗೆ ಸಿಕ್ಕಿರುವ ಭಿನ್ನ ಭಿನ್ನ ಪಾತ್ರಗಳನ್ನು ಎಂಜಾಯ್ ಮಾಡಿದ್ದೇನೆ. ಅದನ್ನೇ ಈಗಲೂ ಮುಂದುವರೆಸಿದ್ದೇನೆ. ಟೈಪ್‌ಕಾಸ್ಟ್ ಆಗುತ್ತಿದ್ದೇನೆ ಅನ್ನಿಸಿದಾಗ, ಬೇಗ ಬೋರ್ ಆಗಿಬಿಡುತ್ತದೆ. ಹೀಗಾಗಿ ಬೇರೆ ಬೇರೆ ವಿಷಯಗಳನ್ನು ಆರಿಸಿಕೊಳ್ಳುತ್ತೇನೆ’ ಎಂದಿದ್ದಾರೆ.

ನಟನಾಗಿ ಮಾತ್ರವಲ್ಲದೆ ತಮ್ಮ ಪ್ರೊಡಕ್ಷನ್ ಸಂಸ್ಥೆಯಿಂದ ಹೊಸ ಪ್ರತಿಭೆಗಳಿಗೆ ಅವಕಾಶ ಮಾಡಿಕೊಡುತ್ತಿರುವ ಡಾಲಿ, ನಿರ್ಮಾಣದ ಕುರಿತೂ ಗಂಭೀರವಾಗಿ ಕಾಲಿಡುತ್ತಿದ್ದಾರಂತೆ. ‘ನಿರ್ಮಾಪಕನಾಗಿರುವುದು ನನ್ನ ದೃಷ್ಟಿಕೋನವನ್ನು ಬದಲಿಸಿದೆ. ಹಲವು ಉತ್ತಮ ಕಥೆಗಳನ್ನು ನೀಡುವ ಆಸೆಯಿದೆ’ ಎಂದು ತಮ್ಮ ಅಭಿಲಾಶೆಯನ್ನು ವ್ಯಕ್ತಪಡಿಸಿದ್ದಾರೆ. ‘ಎಲ್ಲ ಸಮಯದಲ್ಲಿಯೂ ಗೆಲ್ಲಲು ಸಾಧ್ಯವಿಲ್ಲ. ಸೋಲು ಇದ್ದೇ ಇರುತ್ತದೆ. ಆದರೆ ಪ್ರೇಕ್ಷಕರ ನಂಬಿಕೆಯನ್ನು ಕಳೆದುಕೊಳ್ಳಬಾರದು. ನನ್ನ ಸಿನಿಮಾಗಳಲ್ಲಿ ಆ ಪ್ರಾಮಾಣಿಕತೆಯನ್ನು ಕಾಣಬಹುದು’ ಎಂದು ಮಾತು ಸೇರಿಸಿದ್ದಾರೆ. ■